ಇಲ್ಲಿಂದ circulate ಮಾಡುವ ಸಂದರ್ಭದಲ್ಲಿ ಅಲ್ಲಿಗೆ ಬೇಕಾಗಿರುವ ಜವಾಬ್ದಾರಿಯುತ ಅಧಿಕಾರಿಗಳನ್ನು ಇಟ್ಟುಕೊಂಡು ಇಂಥ ಕೆಲಸ ಮಾಡಿಸಿದಲ್ಲಿ ಮುಂದೆ ಇಂಥ ಅನಾಹುತವಾಗುವುದಿಲ್ಲ. ಹಾಗೆಯೇ, ಇದರಲ್ಲಿ ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ, ಅಂಥವರ ಮೇಲೆ ಕಠಿಣ ಕ್ರಮ ಜರುಗಿಸಿದರೆ ಮಾತ್ರ ಇದನ್ನು ನಾವು ತಡೆಯುವುದಕ್ಕೆ ಸಾಧ್ಯವಾಗುತ್ತದೆ. ಅವರನ್ನು suspend ಮಾಡಿದ ಎರಡು ತಿಂಗಳಲ್ಲಿ ಮತ್ತೆ revoke ಮಾಡುವ ಕೆಲಸ ಮಾಡಿದರೆ ಒಂದು ರೀತಿಯಲ್ಲಿ ಹುಡುಗಾಟವಾಗುವ ಕೆಲಸವಾಗುತ್ತದೆ ಎಂದು ನಾನು ಮಾನ್ಯ ಮಂತ್ರಿಯವರಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಸದಸ್ಯರು ಅಭಿಪ್ರಾಯ ಹೇಳಿದ್ದಾರೆ. ಇದರಲ್ಲಿ ಲೋಪವಿದೆ. ಏನಾಗುತ್ತದೆ ಎಂದರೆ, ರಾಷ್ಟ್ರಮಟ್ಟದಲ್ಲಿ ಈ ಪ್ರಶ್ನೆ ಪತ್ರಿಕೆಯನ್ನು ಕೊಡುತ್ತಾರೆ. ಅನೇಕ ಮೂಲಗಳಿಂದ ಅಂದರೆ fax ಮೂಲಕ, E–mail ಮೂಲಕ ಬರುತ್ತದೆ. ಇದೆಲ್ಲಾ ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. 2008–09ರ ವಿಷಯ ಪ್ರಸ್ತಾಪ ಮಾಡಿದ್ದೀರಿ. ಲೋಕಾಯುಕ್ತರ ದಾಳಿಯಾಗಿದ್ದು, ಅದರಿಂದ ಸಿಕ್ಕಿಹಾಕಿಕೊಂಡಿರುವುದನ್ನು ಹೇಳಿದ್ದೀರಿ. ಕಠಿಣವಾದ ಬಿಗಿ ಕ್ರಮ ತೆಗೆದುಕೊಂಡು ಎಲ್ಲಾ ಮಾಡಿದ್ದೇವೆ. ಆದರೂ, ಈ ರೀತಿಯಾಗಿರುವುದನ್ನು ಹೌದು ಎಂದು ಒಪ್ಪಿಕೊಂಡಿದ್ದೇವೆ. ಇನ್ನು ಮುಂದೆ ಈ ರೀತಿ ಲೋಪ ಆಗದ ಹಾಗೆ ನೋಡಿಕೊಳ್ಳುವ ಕಾರ್ಯ ಮಾಡುತ್ತೇವೆ.

ಶ್ರಿ ಖಮರುಲ್ ಇಸ್ಲಾಂ: 24 hour ನಲ್ಲಿ suspend ಆಗಿದ್ದಾರೆ. ತಾವು strong ಆಗಿ ಕ್ರಮ ತೆಗೆದುಕೊಳ್ಳಿ.

ಹಿರೇಕೆರೂರು ತಾಲ್ಲೂಕಿನ ತುಂಗಾ ಮೇಲ್ದಂಡೆ ಯೋಜನೆಗೆ ರೈತರಿಂದ ಪಡೆದ ಭೂಮಿಗೆ ಪರಿಹಾರ

156(1062) ಶ್ರೀ ಪಾಟೀಲ ಬಿ.ಸಿ. (ಹಿರೇಕೆರೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಹಿರೇಕೆರೂರು ತಾಲ್ಲೂಕಿನಲ್ಲಿ ತುಂಗಾ ಮೇಲ್ದಂಡೆ ಯೋಜನೆಗೆ ರೈತರಿಂದ ಪಡೆದ ಭೂಮಿ ಎಷ್ಟು ;

ಆ) ರೈತರಿಂದ ಪಡೆದ ಭೂಮಿಗೆ ಈವರೆಗೂ ಎಷ್ಟು ಪರಿಹಾರ ನೀಡಲಾಗಿದೆ (ವಿವರ ನೀಡುವುದು) ;

ಇ) ರೈತರಿಗೆ ಇನ್ನೂ ಎಷ್ಟು ಪರಿಹಾರವನ್ನು ನೀಡಬೇಕಾಗಿದೆ ಮತ್ತು ಈ ಪರಿಹಾರವನ್ನು ಯಾವಾಗ ನೀಡಲಾಗುತ್ತದೆ ಹಾಗೂ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಒಟ್ಟು 1656–29 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಸದರಿ ಜಮೀನಿಗೆ ಈವರೆಗೆ ಒಟ್ಟು 13.5 ಕೋಟಿ ರೂ. ಪರಿಹಾರ ಮೊತ್ತವನ್ನು ಪಾವತಿಸಲಾಗಿರುತ್ತದೆ.

ಇ) ಇನ್ನೂ 2.4 ಕೋಟಿ ರೂ. ಪರಿಹಾರವನ್ನು ಭೂಮಾಲೀಕರಿಗೆ ಪಾವತಿಸಬೇಕಾಗಿರುತ್ತದೆ. ಈ ಐತೀರ್ಪು ಮೊತ್ತವನ್ನು ಪಡೆಯಲು ಭೂಸ್ವಾಧೀನ ಕಾಯ್ದೆಯನ್ವಯ ಸಂಬಂಧಿಸಿದ ಭೂಮಾಲೀಕರಿಗೆ ನೋಟೀಸುಗಳು ಭೂಸ್ವಾಧೀನಾಧಿಕಾರಿಯವರಿಂದ ಜಾರಿಯಾಗಿದ್ದು, ಅಗತ್ಯ ದಾಖಲೆಗಳನ್ನು ಹಾಜರುಪಡಿಸಿದ ತಕ್ಷಣ ಪರಿಹಾರ ಮೊತ್ತವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ.ಸಿ. ಪಾಟೀಲ್: ಅದು ಹೇಗಾಗಿದೆ ಎಂದರೆ, "ಸಂತೆಗೆ ಮೂರು ಮೊಳ ಸೀರೆ ನೇಯ್ದರು" ಎನ್ನುವ ಗಾದೆ ಇದೆ. ನಾನು ಕೇಳಿದ ಪ್ರಶ್ನೆಗಳ ತೀವ್ರತೆ ಎಷ್ಟಿದೆ ಎನ್ನುವುದು ನಮ್ಮ ಜಿಲ್ಲೆಯ ಸಚಿವರಾದ ಬಸವರಾಜ ಬೊಮ್ಮಾಯಿಯವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ತುಂಗಭದ್ರಾ ಮೇಲ್ದಂಡೆ ಯೋಜನೆ 2001ರಲ್ಲಿ ಪ್ರಾರಂಭವಾಯಿತು. 2011ರಲ್ಲಿ ಕೂಡ ಈ ಪ್ರಶ್ನೆ ಕೇಳುವ ಪರಿಸ್ಥಿತಿ ಬಂದಿರುವುದು ದುರದೃಷ್ಟಕರ. ಏಕೆಂದರೆ, ತಾವು ತಮ್ಮ ಉತ್ತರದಲ್ಲಿ 1656 ಎಕರೆ 29 ಗುಂಟೆ ಜಮೀನನ್ನು ವಶಪಡಿಸಿಕೊಂಡಿದ್ದು 13.5 ಕೋಟಿ ರೂಪಾಯಿ ಪರಿಹಾರ ಕೊಟ್ಟಿದ್ದೇವೆ, ಇನ್ನೂ 2.4 ಕೋಟಿ ರೂಪಾಯಿ ಪರಿಹಾರ ಕೊಡಬೇಕಾಗಿದೆ. ಈ ಜಮೀನುಗಳಿಗೆ ಇಲ್ಲಿಯವರೆಗೂ ಏಕೆ ಪರಿಹಾರ ಕೊಟ್ಟಿಲ್ಲವೆಂದರೆ 4(1), 6(1) notification ಆಗಲೇ ಇಲ್ಲ, ಮಾಡಲೇ ಇಲ್ಲ. ಅಧಿಕಾರಿಗಳು ಹೋಗಿ

ಜಮೀನನ್ನು acquire ಮಾಡಿಕೊಂಡು ಅಲ್ಲಿ ಕಾಲುವೆ ತೆಗೆದರು. ಆವತ್ತಿನ ದಿವಸ ಸರ್ಕಾರ ಈ ಜಮೀನುಗಳಿಗೆ ಒಂದು ಎಕರೆಗೆ 45 ಸಾವಿರ ರೂಪಾಯಿ ನಿಗದಿ ಮಾಡಿತ್ತು. ಇವತ್ತಿನ ದಿವಸ ಅಲ್ಲಿಯ ಒಂದು ಎಕರೆ ಜಮೀನಿಗೆ 10 ಲಕ್ಷ ರೂಪಾಯಿಗಳ ವರೆಗೆ ಬೆಲೆ ಇದೆ. ಅಲ್ಲಿಂದ ಇಲ್ಲಿಯವರೆಗೆ ಬಡ್ಡಿಯನ್ನೂ ಕಟ್ಟಲಿಲ್ಲ. ಆ ರೈತರ ಜಮೀನು acquire ಆಗಲಿಲ್ಲ, 4(1), 6(1) notification ಆಗಲಿಲ್ಲ. JMIC ಆಗಲಿಲ್ಲವೆಂದು ಕೆಲವರು ಹೇಳಿದರು. ಆವತ್ತಿನ ಕಾಲದಲ್ಲಿ ರೈತರಿಗೆ JMIC ಬಗ್ಗೆ ಗೊತ್ತಿರಲಿಲ್ಲ. ಆಮೇಲೆ ಕೆಲವು ಅವತ್ತಿನ ಅಧಿಕಾರಿಗಳು ಏನು ಮಾಡಿದರು, ತಮಗೆ ಬೇಕಾದಂಥ ಕೆಲವು ರೈತರನ್ನು ಹಿಡಿದುಕೊಂಡು ಇದರಲ್ಲಿ JMIC ಮಾಡಿ ಇದರಲ್ಲಿ ಇಷ್ಟು ಮರಗಳಿದ್ದವು ವರದಿಕೊಡಿ ಎಂದರು. ಇದು ಬಹಳ ತೀವ್ರತೆಯಿದೆ. ಈಗಾಗಲೇ ಇದರ ಬಗ್ಗೆ ಮಾಜಿ ಶಾಸಕರ ಮಗ ಚಂದ್ರು ಎಂಬುವವರು, ಶಿವಮೊಗ್ಗದ Chief Engineer, UTP ಕಛೇರಿಯ ಮುಂದೆ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ವಿಷಯ ಮಾನ್ಯ ಸಚಿವರಿಗೂ ಹಾಗೂ ಉದಾಸಿ ಅಣ್ಣನವರಿಗೂ ಕೂಡ ಗೊತ್ತಿದೆ. ಆದಾಗ್ಯೂ ಕೂಡ ನಾನು ಏಕೆ ಈ ವಿಷಯ ಹೇಳುತ್ತಿದ್ದೇನೆಂದರೆ, 4(1), 6(1) ಮಾಡಲಿಕ್ಕೆ ತೊಂದರೆ ಏನಾಗುತ್ತದೆ? ಅವತ್ತಿನ ಕಾಲದಲ್ಲಿ ರೈತರಿಗೆ ಮರಗಳಿದ್ದದ್ದು ಗೊತ್ತಿರಲಿಲ್ಲ.

ಅಧ್ಯಕ್ಷರು : ಪ್ರಶ್ನೆ ಕೇಳಿ. ಇದು ಪ್ರಶ್ನೆಯಾಗುವುದಿಲ್ಲ. ಅವರು ಕೊಟ್ಟ ಉತ್ತರದಲ್ಲಿ ಏನು Clarification ಬೇಕೊ ಅಷ್ಟನ್ನು ಕೇಳಿ. ಆಯಿತು ಬಿಡಿ, ಸಾಕಷ್ಟು ಕೇಳಿದ್ದೀರಿ.

ಶ್ರೀ ಬಿ.ಸಿ.ಪಾಟೀಲ್ : ಇದರ ಬಗ್ಗೆ ತಮ್ಮ ಗಮನ ಸೆಳೆಯಬಯಸುತ್ತೇನೆ. ಏಕೆಂದರೆ, ರೈತರ ಪರವಾಗಿರುವಂಥ ಸರ್ಕಾರ ಕೃಷಿ ಬಜೆಟ್ ಅಲ್ಲ, ಕುರ್ಚಿ ಬಜೆಟ್ ಕೊಟ್ಟಿದ್ದಾರೆ.

ಅಧ್ಯಕ್ಷರು : ಅದು ಬೇರೆ. ನೀವು ಪ್ರಶ್ನೆಗೆ ಏನು clarification ಬೇಕೊ ಅಷ್ಟನ್ನು ಕೇಳಿ. ಅವರು ಉತ್ತರ ಹೇಳಲಿ.

ಶ್ರೀ ಬಿ.ಸಿ.ಪಾಟೀಲ್ : ಈಗ ಏನಾಗಿದೆ ಎಂದರೆ, ಆ ರೈತ ಆತ್ಮಹತ್ಯೆಯಾದ ನಂತರ ಸಚಿವರು ಅಲ್ಲಿಗೆ ಬಂದಿದ್ದರು. ಆಗ ಪಂಚಾಯಿತಿ

ಮಾಡಿ JMIC ಮಾಡಿ ತಕ್ಷಣ ಒಂದು ತಿಂಗಳೊಳಗೆ ಪರಿಹಾರ ಕೊಡುತ್ತೇವೆಂದು ಹೇಳಿದ್ದರು. ನಾಲ್ಕು ತಿಂಗಳಾದರೂ ಇವತ್ತಿನವರೆಗೆ ಕೊಡುವುದಕ್ಕಾಗಿಲ್ಲ. ಏನಾಗಿದೆ ಎಂದರೆ, ನಮ್ಮ ರಟ್ಟೆಹಳ್ಳಿ sub division ನಲ್ಲಿ Assistant Engineers, Junior Engineers, Executive Engineers ಇಲ್ಲ, ಯಾರ್ಯಾರೂ ಇಲ್ಲ.

ಅಧ್ಯಕ್ಷರು : ಈಗ ನೀವು ಪ್ರಶ್ನೆ ಕೇಳಿ. ಎಲ್ಲವನ್ನೂ ಹೇಳುತ್ತಾ ಹೋದರೆ ಹೇಗೆ? Please.

ಶ್ರೀ ಬಿ.ಸಿ.ಪಾಟೀಲ್ : ಈಗ ಅವರು ಅದಕ್ಕೆ ಉತ್ತರ ಹೇಳಲಿ. ನಂತರ ನಾನು ಕೇಳುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ : ಮಾನ್ಯ ಅಧ್ಯಕ್ಷರೆ, ಅವರೇ ಹೇಳಿದಂತೆ 2000 ನೇ ಇಸವಿಯಿಂದ ಪ್ರಾರಂಭವಾಯಿತು. ನಮಗೆ ಒಟ್ಟು ಬೇಕಾಗಿರುವುದು 2,159 ಎಕರೆ ಅದರಲ್ಲಿ 1,656 ಎಕರೆಯನ್ನು ವಶಪಡಿಸಿಕೊಂಡಿದ್ದೇವೆ. 13.50 ಕೋಟಿ ರೂಪಾಯಿಗಳನ್ನು ಈಗಾಗಲೇ ಸಂದಾಯ ಮಾಡಿದ್ದೇವೆ. ಸುಮಾರು ಒಂದು ಕೋಟಿ ಆರವತ್ತೊಂದು ಲಕ್ಷ ರೂಪಾಯಿ ನಮ್ಮ ಇಲಾಖೆಯಿಂದ ಬಿಡುಗಡೆ ಮಾಡಿದ್ದೇವೆ. ಆದರೆ, ಅದನ್ನು ರೈತರಿಗೆ ಕೊಡಬೇಕಾದಾಗ ಅವರು ಸರಿಯಾದ ಮಾಹಿತಿಗಳನ್ನು ಮತ್ತು ಕಾಗದಪತ್ರಗಳನ್ನು ಕೊಡದಿರುವ ಕಾರಣದಿಂದ ಮತ್ತು ಕೆಲವು JMFC ಕೋರ್ಟಿನಲ್ಲಿರುವುದರಿಂದ ಕೊಡದೆ ಹಾಗೆ ಕೂತಿದೆ. ಅದ್ದರಿಂದ, ಅದನ್ನು ಕೂಡಲೇ ಕೊಡುವುದಕ್ಕೆ ನಾನೀಗಾಗಲೇ ಆದೇಶ ಮಾಡಿದ್ದೇನೆ. JMFC ಕೋರ್ಟಿನಲ್ಲಿ ಎಲ್ಲೆಲ್ಲಿ ವಾರಸುದಾರರ ಮತ್ತು ಇತರ ತಕರಾರು ಇದೆ, ಅಲ್ಲಿ ಕೂಡಲೇ ಕೊಡುವುದಕ್ಕೆ ನಾನು ಈಗಾಗಲೇ ಹೇಳಿದ್ದೇನೆ. ಇನ್ನೂ 502 ಎಕರೆ Balance ಇದೆ, ಸುಮಾರು ಮೂರು ಕೋಟಿ ರೂಪಾಯಿ ಬೇಕು. ಇದನ್ನು ಬಿಡುಗಡೆ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ. ಆ ಪ್ರಕ್ರಿಯೆ ಪ್ರಾರಂಭವಾಗಿದ್ದು 502 ಎಕರೆಯಲ್ಲಿ 104 ಎಕರೆಗಳನ್ನು ಇದೇ ತಿಂಗಳ ಕೊನೆಯಲ್ಲಿ Award ಮಾಡುತ್ತೇವೆ. ಇನ್ನು ಮಿಕ್ಕಿದ್ದನ್ನೂ ಕೂಡ ಆದಷ್ಟು ಬೇಗ ಮಾಡುತ್ತೇವೆ. ಅವರು ಎತ್ತಿರುವ ಮೂಲ ಪ್ರಶ್ನೆ, JMIC ಯಲ್ಲಿ ಯಾವರೀತಿ ಏನೇನು ಆಗಿದೆ ಎಂಬುದು ಅವರಿಗೆ ಗೊತ್ತಿದೆ. ಬಹಳಷ್ಟು

ಜನರು ಗಿಡಗಳು ಇಲ್ಲದಿದ್ದರೂ Claim ಮಾಡಿದ್ದಾರೆ. ಕೆಲವರಿಗೆ ನಿಜವಾಗಿ ಗಿಡಗಳು ಇದ್ದವರಿಗೂ ಕೂಡ ಸಿಕ್ಕಿಲ್ಲ. ಆ ತಾರತಮ್ಯವಿರುವುದರಿಂದ ಯಾರ್ಯಾರಿಗೆ ಬಾಕಿಯಿತ್ತೊ ಆ ಮೀಟಿಂಗ್ ಆದ ತಕ್ಷಣ ಆ ಹಣವನ್ನು ಎಲ್ಲೆಲ್ಲಿ ದಾಖಲೆಗಳನ್ನು ಕೊಟ್ಟಿದ್ದಾರೆ ಅಲ್ಲೆಲ್ಲಾ ಈಗಾಗಲೇ ಹಣವನ್ನು ಪಾವತಿಸಿದ್ದೇವೆ. ನಾಲ್ಕು ತಿಂಗಳಾದರೂ ಆಗಿಲ್ಲ ಎನ್ನುವುದು ಸತ್ಯವಲ್ಲ. ಈಗಾಗಲೇ ಪಾವತಿಸಿದ್ದು, ಇನ್ನು ಕೆಲವು Claim ಗಳಿವೆ. ಇವುಗಳಿಗಾಗಿ ನಮ್ಮ Chief Administrative Officer and Special DC ಯವರ ನೇತೃತ್ವದಲ್ಲಿ ಒಂದು committee ಮಾಡಿದ್ದೇವೆ. ಯಾರ್ಯಾರದು claim ಬಾಕಿಯಿದೆ ಆ ಬಗ್ಗೆ ಅವರು ವಿಚಾರಣೆ ಮಾಡಿ ಆ ದಾಖಲೆಗಳನ್ನು ನೋಡಿ ಅವರು ವರದಿ ಕೊಟ್ಟ ನಂತರ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿ ಒಂದು ಲೋಪವಾಗಿದೆ. ಯಾವ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದಾರೆ, ಅಲ್ಲಿ ಕಾಲುವೆ ಹರಿದಿಲ್ಲ. ಕೆಲವು ಕಡೆ ಸ್ವಾಧೀನಪಡಿಸಿಕೊಂಡಿರದ ಜಮೀನಿನಲ್ಲಿ ಕೂಡ ಕಾಲುವೆ ಹರಿದಿರುವುದರಿಂದ ಕೆಲವು ಸಮಸ್ಯೆಗಳು ಉದ್ಭವವಾಗಿದೆ. ಅಂಥದ್ದನ್ನು ಕೂಡ ಅವರು ಸ್ವತ: ಪರಿಶೀಲಿಸಿ ಕೂಡಲೇ ಪರಿಹಾರ ಕೊಡಲಿಕ್ಕೆ ಈಗಾಗಲೇ ಆದೇಶ ಕೊಟ್ಟಿದೆ. ಹಿನ್ನೀರಿನಿಂದ ಬಹುತೇಕವಾಗಿ ಇಷ್ಟು ದೊಡ್ಡ ಪರಿಹಾರ ಎಲ್ಲೂ ಕೊಟ್ಟಿಲ್ಲ ಅಷ್ಟು ದೊಡ್ಡ ಪರಿಹಾರ ನಾವು ಕೊಟ್ಟಿದ್ದೇವೆ. ನಾನು ಬಂದ ಮೇಲೆ ಮೂರು ಕೋಟಿ ಮೂವತ್ಮೂರು ಲಕ್ಷ land acquisition ಅಲ್ಲದೆ ಹಿನ್ನೀರಿನಿಂದ, ಬೆಳೆಹಾನಿಯಾದಾಗ ಮತ್ತು ಇತರೆ ಹಾನಿಯಾದಾಗ ಮತ್ತು JMFC ಯಲ್ಲಿ ಏನೇನು ಅನ್ಯಾಯವಾಗಿದೆ, ಅದಕ್ಕೆ ಮೂರು ಕೋಟಿ ಮೂವತ್ಮೂರು ಲಕ್ಷ ರೂ.ಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಇನ್ನೂ ಕೆಲವು claim ಗಳೇನಿವೆ, ಅದನ್ನು ಆದಷ್ಟು ಬೇಗನೆ ಮಾಡಲಿಕ್ಕೆ, ನನಗೂ ಕೂಡ ಇದು ಒಂದೇಸಾರಿ ಇತ್ಯರ್ಥವಾಗಬೇಕೆನ್ನುವ ಇಚ್ಛೆಯಿದೆ. ಈ ಸಮಸ್ಯೆಯ ಸುಳಿ ಏನಿದೆ, ಇದರಿಂದ ಹೊರ ಬಂದು ಕಾನೂನು ಪ್ರಕಾರ ಕೂಡಲೇ ಎಲ್ಲಾ ರೀತಿಯ ಯಾವೊಬ್ಬ ರೈತನಿಗೆ ಅನ್ಯಾಯವಾಗದ ರೀತಿಯಲ್ಲಿ ನಮ್ಮ ಸರ್ಕಾರ ಪರಿಹಾರ ಕೊಡುತ್ತದೆ. ಇದರ ಜೊತೆಗೆ ಯಾರು false claim ಮಾಡಿದ್ದಾರೆ, ಅವರ ಮೇಲೂ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾದ ಕ್ರಮ ಜರುಗಿಸುತ್ತೇವೆ.

ಶ್ರೀ ಬಿ.ಸಿ.ಪಾಟೀಲ್ : ಸಚಿವರು ಬಂದ ನಂತರ ಮಾಡಿದ್ದಾರೆ, ನಾನು ಮಾಡಿಲ್ಲವೆಂದು ಹೇಳುವುದಿಲ್ಲ. ಆದರೆ, ಅಲ್ಲಿ ಏನಾಗಿದೆ, ಅಲ್ಲಿ ಅಧಿಕಾರಿಗಳೇ ಇಲ್ಲ. ಪ್ರತಿ ದಿನ ರೈತರು ತುಂಗಾ ಮೇಲ್ದಂಡೆ ಯೋಜನೆ ರಟ್ಟೀಹಳ್ಳಿಯ ಕಛೇರಿಗೆ ಹೋಗುತ್ತಾರೆ ಅಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ಕಾಯುತ್ತಾರೆ. ಅಲ್ಲಿಗೆ ಹೊನ್ನಾಳಿ Executive Engineer in-charge ಇದ್ದಾರೆ. AE, JE, ಇಲ್ಲ. ಮೊದಲನೆಯದಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದಿಷ್ಟೆ ಅಲ್ಲಿಗೆ ತಕ್ಷಣ ಶಾಶ್ವತವಾದಂಥ ಅಧಿಕಾರಿಯನ್ನು ನೇಮಿಸಿ. ಇಲ್ಲಾಂದ್ರೆ ಏನಾಗುತ್ತದೆಂದರೆ, ನೀವು ಹಿರೇಕೆರೂರು ಬಿಟ್ಟು ಮುಂದೆ ರಾಣೆಬೆನ್ನೂರು, ಹಾವೇರಿಗೆ ನೀರು ಕೊಡುವುದಕ್ಕೆ ಸಾಧ್ಯವೇ ಇಲ್ಲ. ಹಿರೇಕೆರೂರು ಪಾಸಾದ ನಂತರ ಮುಂದಕ್ಕೆ ಹೋಗಬೇಕು. ಈಗ lining work stop ಆಗಿದೆ. ರೈತರಿಗೆ ಪರಿಹಾರ ಕೊಡದಿರುವುದರಿಂದ ಇವತ್ತು lining work ಮಾಡಲಿಕ್ಕೆ ಬಿಡುತ್ತಿಲ್ಲ. ಕೆಲವರು ಅಲ್ಲಿಗೆ ಅಧಿಕಾರಿಗಳು ಬರುವುದಿಲ್ಲವೆಂದು ಹೇಳುತ್ತಾರೆ. ರಾಣೆಬೆನ್ನೂರಿನಲ್ಲಿ ಏಕೆ ಅಧಿಕಾರಿಗಳು ಇದ್ದಾರೆ? ಹೊನ್ನಾಳಿಯಲ್ಲಿ ಏಕೆ ಅಧಿಕಾರಿಗಳು ಇದ್ದಾರೆ? ಹಿರೇಕೆರೂರಿನಲ್ಲಿ ಏಕೆ ಇಲ್ಲ?

ಶ್ರೀ ಬಸವರಾಜ್ ಬೊಮ್ಮಾಯಿ : ಆ ಪ್ರಶ್ನೆ ಇಲ್ಲಿಲ್ಲ. ಈಗಾಗಲೇ ಅಲ್ಲಿಗೆ Executive Engineer ನ್ನು ಹಾಕಿದ್ದೇವೆ, ಮಿಕ್ಕ ಎಲ್ಲಾ Engineers ನ್ನು ಕೂಡಲೇ ನಾವು ಅಲ್ಲಿಗೆ ಕಳುಹಿಸುತ್ತೇವೆ.

ಅಧ್ಯಕ್ಷರು : ಆಯಿತು ಬಿಡಿ. ಪ್ರಶ್ನೋತ್ತರದಲ್ಲಿ ಇದೇನಿದು? ಅಧಿಕಾರಿಗಳು ಅಲ್ಲಿ ಇಲ್ಲ ಎಂದು ಹೇಳಿದಿರಿ, ತಕ್ಷಣ ಅಲ್ಲಿಗೆ ಕಳುಹಿಸುತ್ತೇವೆಂದು ಹೇಳಿದ್ದಾರೆ. ಸಾಕು ಬಿಡಿ.

ಶ್ರೀ ಬಿ.ಸಿ.ಪಾಟೀಲ್ : ನನ್ನದು ಈ ಮೂರು ಸದನದಲ್ಲಿ ಬಂದಿರುವುದು ಒಂದೇ ಒಂದು ಪ್ರಶ್ನೆ. ಇಲ್ಲಿಯವರೆಗೆ ನಾನು ಮೂರು ಸಾರಿ ಹಾಕಿದ ಪ್ರಶ್ನೆ ಒಂದೂ ಬಂದಿಲ್ಲ. At least ರೈತರ ಪರವಾಗಿ ಹಾಕಿರುವ ಪ್ರಶ್ನೆಗೆ ಒಂದು ಐದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲವೆಂದರೆ ಹೇಗೆ?

ಶ್ರೀ ಬಸವರಾಜ್ ಬೊಮ್ಮಾಯಿ : ಹೇಳಿ ಹೇಳಿ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಎಲ್ಲಿದೆ?

ಶ್ರೀ ಬಿ.ಸಿ.ಪಾಟೀಲ್ : ನಾನು ಅವರಿಗೆ ವಿರೋಧ ಹೇಳುವುದಿಲ್ಲ. ಈ ಸಮಸ್ಯೆಗೆ ಪರಿಹಾರ ಕೊಡಬೇಕು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಈಗೇನಾಗಿದೆ, ಕೆಲವು ಕಡೆ ತಪ್ಪಾಗಿದೆ. ಬಹಳಷ್ಟು ಜನ ಹಿಂದೆ ಕೆಲವು ಅಧಿಕಾರಿಗಳು ರೈತರ ಜೊತೆಗೆ ಶಾಮೀಲಾಗಿ ತಪ್ಪು JMIC ಬರೆದು ಹೆಚ್ಚಿಗೆ ಪರಿಹಾರ ಕೊಡಿಸಿದ್ದಾರೆ. ಆಗ ಏನಾಗಿದೆ ಎಂದರೆ, ಪಕ್ಕದ ರೈತರ ಕಣ್ಣು ಕೆಂಪಾಗುತ್ತದೆ ಆ ಹೊಲದಲ್ಲಿ ಏನೂ ಇಲ್ಲದವನಿಗೆ ಪರಿಹಾರ ಕೊಟ್ಟರು, ನನಗೆ ಇಲ್ಲವಲ್ಲ ಎಂದು ಅವರ ಕಣ್ಣು ಕೆಂಪಾಗುತ್ತದೆ. ಅದಕ್ಕೆ. ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೆ ನೀವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ.

ಶ್ರೀ ಬಸವರಾಜ್ ಬೊಮ್ಮಾಯಿ : ಬಹಳ ಸ್ಪಷ್ಟವಾಗಿ ನಾನು ಈಗಾಗಲೇ ಹೇಳಿದ್ದೇನೆ. ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ, ಅವರ ಮೇಲೆ ಕಮ ತೆಗೆದುಕೊಳ್ಳುತ್ತೇನೆ ಮತ್ತು ಯಾರು false claim ಮಾಡಿದ್ದಾರೆ, ಅವರ ಮೇಲೂ ಕಮ ತೆಗೆದುಕೊಳ್ಳುತ್ತೇನೆ. ಅಲ್ಲಿಗೆ ಅಧಿಕಾರಿಗಳನ್ನು ತಕ್ಷಣ ಹಾಕುತ್ತಿದ್ದೇವೆ. ಮತ್ತು ನಾವು ಕೂಡ ಅವರ ಸಹಕಾರದಿಂದ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ಶ್ರೀ ಬಿ.ಸಿ.ಪಾಟೀಲ್: ಆದಷ್ಟು ಬೇಗನೆ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು ಮತ್ತು ಹಿನ್ನೀರಿನಿಂದ ಸ್ವಲ್ಪ ಹಣ ಬರುವುದಿದೆ, ಅದನ್ನು ಕೊಡಿಸಿ ಕೊಡಬೇಕು.

ಶ್ರೀ ಬಸವರಾಜ್ ಬೊಮ್ಮಾಯಿ : ಆಯಿತು. ತಕ್ಷಣವೇ ಅಧಿಕಾರಿಗಳನ್ನು ಹಾಕಿ ಕ್ರಮ ತೆಗೆದುಕೊಳ್ಳಲಾಗುವುದು.

ಅರ್ಕಾವತಿ ನದಿ ಪುನಃಶ್ಚೇತನಗೊಳಿಸುವುದು

157(906) ಶ್ರೀ ವಿಶ್ವನಾಥ್ ಎಸ್.ಆರ್. (ಯಲಹಂಕ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರ್ಕಾವತಿ ನದಿ ಪುನಃಶ್ಚೇತನಗೊಳಿಸಲು ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ನೇಮಕ ಮಾಡಿದ್ದು, ಸದರಿ ಸಮಿತಿಯು ಕೈಗೊಂಡ ಕ್ರಮಗಳೇನು ;